ಸರಕಾರಿ ತಾಂತ್ರಿಕ ತರಬೇತಿ ಶಾಲೆಯ ಮಂಜೂರಾತಿ ಬಗ್ಗೆ

೯೬೨.(ಎ) ಶ್ರೀ ಕೆ. ಕುಶಾಲ (ಸುಳ್ಯ).— ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲೆಗೊಂದು ಸರ್ಕಾರಿ ತಾಂತ್ರಿಕ ತರಬೇತಿ (ಐಟಿಐ) ಶಾಲೆಗಳನ್ನು ಸರ್ಕಾರ ಮಂಜೂರು ಮಾಡುವುದಾಗಿ ಘೋಷಿಸಿದ್ದುದು ನಿಜವಲ್ಲವೆ?

ಆ) ಹಾಗಿದ್ದಲ್ಲಿ, ಸುಳ್ಯ ತಾಲ್ಲೂಕಿನ ಬೆಳ್ಳಾರೆಗೆ ತಾಂತ್ರಿಕ ತರಬೇತಿ ಶಾಲೆಯಂ (ಐಟಿಐ) ಮಂಜೂರಾತಿ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

ಅ) ಈಗಾಗಲೇ ಪ್ರತಿ ಜಿಲ್ಲೆಯಲ್ಲೂ ಕನಿಷ್ಠ ಒಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಇದೆ.

ಆ) ಸದ್ಯಕ್ಕೆ ಯಾವ ಕ್ರಮವನ್ನೂ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ.

ಇ) ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಈಗಾಗಲೇ ಒಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಇದೆ.

ಆ) ಸುಳ್ಯ ತಾಲ್ಲೂಕು ಸೇರಿದಂತೆ ಎಲ್ಲಾ ತಾಲೂಕುಗಳಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ತೆರೆಯಲು ಹಣಕಾಸು ಮತ್ತು ಶಿಕ್ಷಕರ ಕೊರತೆಯಿಂದಾಗಿ ಸಾಧ್ಯವಾಗಿಲ್ಲ.

ಮೈಸೂರಿನ ಪಿ. ಕೆ. ಸ್ಯಾನಿಟೋರಿಯಂನಲ್ಲಿ ಔಷಧಿ ಮಾರಾಟ ಮಾಡುತ್ತಿರುವ ಸಹಕಾರ ಸಂಘದ ಬಗ್ಗೆ

೯೭೧. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರ ಪಿ. ಕೆ. ಸ್ಯಾನಿಟೋರಿಯಂ ಆಸ್ಪತ್ರೆಯಲ್ಲಿ ಔಷಧವನ್ನು ಮಾರಾಟ ಮಾಡಲು ಸಹಕಾರ ಸಂಘವು ಯಾವಾಗ ರಚನೆಯಾಯಿತು,

ಆ) ಈ ಸಂಘವು ಸಂಪಾದನೆ ಮಾಡಿದ ಲಾಭದಿಂದ ಯಾವ ಯಾವ ಕಾರ್ಯಕ್ಕಾಗಿ ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ,

ಇ) ೧೯೮೪ ರಿಂದ ಇದುವರೆಗೆ ಈ ಸಹಕಾರ ಸಂಘವು ಗಳಿಸಿರುವ ಲಾಭವೆಷ್ಟು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಈ ಸಹಕಾರ ಸಂಘವನ್ನು ೨೨-೩-೧೯೪೬ ರಂದು ನೋಂದಾಯಿಸಲಾಗಿದೆ.

ಆ) ಈ ಸಂಘವು ಗಳಿಸಿದ ಲಾಭದ ಪೈಕಿ ೨೫,೦೦೦ ರೂ.ಗಳನ್ನೂ ಪಿ. ಕೆ. ಸ್ಯಾನಿಟೋರಿಯಂ ಮಕ್ಕಳ ಆಸ್ಪತ್ರೆಯ ನಿರ್ವಾಣಕ್ಕಾಗಿಯೂ, ೨೦,೦೦೦ ರೂ. ಗಳನ್ನು ಸರ್ಕಾರದ ದಾನದತ್ತಿ ನಿಧಿಗೂ, ಮತ್ತು ೮,೦೦೦ ರೂ.ಗಳನ್ನು ರಾಷ್ಟ್ರೀಯ ಡಿಫೆನ್ಸ್ ಫಂಡಿಗೂ ವಂತಿಗೆಯಾಗಿ ಪಾವತಿಸಲಾಗಿದೆ.

ಇ) ೧೯೮೪-೮೫ನೇ ಸಾಲಿಗೆ ಗಳಿಸಿದ ಲಾಭ ರೂ. ೮೨,೭೫೩.೬೨

೧೯೮೫-೮೬ನೇ ಸಾಲಿಗೆ ಗಳಿಸಿದ ಲಾಭ ರೂ. ೬೨,೮೬೧.೦೦

೧೯೮೬-೮೭ನೇ ಪ್ರಸಕ್ತ ಸಾಲಿಗೆ ಆರ್ಥಿಕ ತಃಖ್ತೆಗಳನ್ನು ೧೯೮೭ ಜೂನ್ ಅಖ್ಖೆರಿಗೆ ತಯಾರಿಸಿ ಅಂತಿಮಗೊಳಿಸಲಾಗುವುದು.